**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 729/2024**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 11.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಚಿದಾನಂದ ಕರವೀರಪ್ಪನವರ |
| ತಂದೆಃ ಗಂಡನ ಹೆಸರು | ನಾಗಪ್ಪ |
| ಉದ್ಯೋಗ | PSI |
| ವಯಸ್ಸು | 55 |
| ವಾಸಸ್ಥಳ | ಕಲಘಟಗಿ |

**ಪ್ರಾರಂಭ ಸಮಯಃ 01.05 ಪಿ. ಎಂ.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ನಾನು ದಿಃ 12.10.2023 ರಿಂದ ಇಲ್ಲಿಯವರೆಗೆ ಕಲಘಟಗಿ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 24.12.2023 ರಂದು ಸುಮಾರು ಸಾಯಂಕಾಲ 7.00 ಗಂಟೆಗೆ ಶ್ರೀಶೈಲ ಕೌಜಲಗಿ, ಪಿಐ ಕಲಘಟಗಿಯವರು ನನ್ನನ್ನು ಕರೆದು ಗಳಿಗೆ ಹೂಲಕೊಪ್ಪ ಗ್ರಾಮದ ಗಾಂಧಿ ವೃತ್ತದಲ್ಲಿ ಹತ್ತಿರ ಒಬ್ಬ ವ್ಯಕ್ತಿಯು ವಿಸ್ಕಿ ಟೆಟ್ರಾ ಪಾಕೇಟಗಳನ್ನು ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಬಾತ್ಮಿ ಬಂದ ಮೇರೆಗೆ ನೀನು ಹೋಗಿ ದಾಳಿ ಮಾಡು ಎಂದು ಸದರಿ ಪಿಐ ರವರು ನನಗೆ ನಿರ್ದೇಶನ ನೀಡಿದ್ದು ಸದರಿ ಅವರ ಮಾರ್ಗದರ್ಶನದಂತೆ ಠಾಣೆಯ ಕರ್ತವ್ಯದಲ್ಲಿದ್ದ ಚಾಸಾ4 ಮತ್ತು 5 ರವರನ್ನು ಕರೆದುಕೊಂಡು ಸದರಿ ಬಾತ್ಮಿ ವಿಷಯವನ್ನು ಸದರಿಯವರಿಗೆ ತಿಳಿಸಿ

ಚಾಸಾ4 ರವರಿಗೆ ಇಬ್ಬರು ಪಂಚರನ್ನು ಕರೆ ತರಲು ತಿಳಿಸಿದ್ದೇನು. ಅದರಂತೆ ಚಾಸಾ4 ರವರು ನನ್ನ ಮುಂದೆ ಇಬ್ಬರು ಪಂಚರಾದ ಚಾಸಾ2 ಮತ್ತು 3 ರವರನ್ನು ಹಾಜರುಪಡಿಸಿದರು. ಸದರಿ ಪಂಚರಿಗೆ ಬಾತ್ಮಿ ವಿಷಯವನ್ನು ತಿಳಿಸಿ ದಾಳಿ ಕಾಲಕ್ಕೆ ಸದರಿಯರವರು ಹಾಜರಿದ್ದು ಪಂಚನಾಮೆಯನ್ನು ಬರೆಸಿಕೊಡಲು ಸೂಚಿಸಿದ್ದು ಸದರಿ ಅವರು ಅದಕ್ಕೆ ಒಪ್ಪಿ ನಮ್ಮೊಂದಿಗೆ ಕರೆದುಕೊಂಡು ಗಳಿಗೆಹೊಲಕೊಪ್ಪ ಗ್ರಾಮಕ್ಕೆ ರಾತ್ರಿ 7.30 ಗಂಟೆಗೆ ಠಾಣೆ ಬಿಟ್ಟು ಹೊರಟು ರಾತ್ರಿ ಸುಮಾರು 8.00 ಗಂಟೆಗೆ ಗಳಿಗೆಹೊಲಕೊಪ್ಪ ಗ್ರಾಮದ ಗಾಂಧಿ ವೃತ್ತದ ಹತ್ತಿರ ಇರುವ ಉಡುಪಿ ಹೋಟೇಲಿಗೆ ತಲುಪಿದ್ದೆವು. ಅಲ್ಲೇ ಮರೆಮಾಚಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿಯು ತನ್ನ ಚೀಲದಲ್ಲಿರುವ ಟೆಟ್ರಾ ಪಾಕೇಟೆಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂತು. ಎದುರಿಗೆ ಇಬ್ಬರು ಸಾರ್ವಜನಿಕರು ಟೆಟ್ರಾ ಪಾಕೇಟಗಳನ್ನು ತೆಗೆದುಕೊಳ್ಳುವುದು ನೋಡಿದ್ದು ಎಲ್ಲರೂ ಕೂಡಿ ಹೋಗಿ ಸದರಿ ಸ್ಥಳವನ್ನು ದಾಳಿ ಮಾಡಲಾಗಿ ಸದರಿ ಇಬ್ಬರು ಸಾರ್ವಜನಿಕರು ತಮ್ಮಲ್ಲಿ ಇದ್ದ ಟೆಟ್ರಾ ಪಾಕೇಟೆಗಳನ್ನು ಸ್ಥಳದಲ್ಲೇ ಬಿಟ್ಟು ಓಡಿ ಹೋದರು.

ನಾವೆಲ್ಲರೂ ಸೇರಿ ಸ್ಥಳದಲ್ಲಿ ಇದ್ದ ವ್ಯಕ್ತಿಯ ಹೆಸರನ್ನು ಕೇಳಲಾಗಿ ವ್ಯಕ್ತಿಯು ತನ್ನ ಹೆಸರು ದ್ಯಾಮನಗೌಡ ಬಸವನಗೌಡ ಪಾಟೀಲ ಎಂದು ತಿಳಿಸಿದ್ದು, ಸದರಿ ಚೀಲದಲ್ಲಿ ಏನಿದೆ ಎಂದು ಕೇಳಲಾಗಿ ವ್ಯಕ್ತಿಯು ಟೆಟ್ರಾ ಪಾಕೇಟಗಳು ಇವೆ ಎಂದು ತಿಳಿಸಿದರು. ನಂತರ ಸದರಿ ಟೆಟ್ರಾ ಪಾಕೇಟಗಳನ್ನು ಮಾರಲು ನಿನಗೆ ಪರವಾನಿಗೆ ಇದೆಯೇ ಎಂದು ಕೇಳಲಾಗಿ ವ್ಯಕ್ತಿಯು ಇರುವುದಿಲ್ಲ ಎಂದು ತಿಳಿಸಿದರು.

ಸದರಿ ಚೀಲದಲ್ಲಿದ್ದ ಟೆಟ್ರಾ ಪಾಕೇಟಗಳಗಳನ್ನು ಪಂಚರ ಸಮಕ್ಷಮ ನೆಲಕ್ಕೆ ಸುರಿದು ಅವುಗಳನ್ನು ಏಣಿಸಲಾಗಿ 90 ಎಮ್. ಎಲ್ ಅಳತೆಯ ಒಟ್ಟು original choice deluxe whisky 180 ಟೆಟ್ರಾ ಪಾಕೇಟಗಳು ಇರುವುದು ಕಂಡುಬಂತು. ಸದರಿ ಟೆಟ್ರಾ ಪಾಕೇಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಒಂದು ಗೊಬ್ಬರ ಚೀಲದಲ್ಲಿ ಹಾಕಿ ಶೀಲು ಮಾಡಿ ನನ್ನ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಸದರಿ ಚೀಲಕ್ಕೆ ಅಂಟಿಸಲಾಯಿತು. ಸದರಿ ಪಂಚನಾವೆಯನ್ನು ರಾತ್ರಿ 8.15 ಗಂಟೆಯಿಂದ 9.30 ಗಂಟೆಯವರೆಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು.

ರಾತ್ರಿ 10.15 ಗಂಟೆಗೆ ಆರೋಪಿ ಮತ್ತು ಮಾಲು ಸಮೇತವಾಗಿ ಠಾಣೆಗೆ ಹಾಜರಾಗಿ ಚಾಸಾ8 ರವರಿಗೆ ಕರ್ನಾಟಕ ಅಬಕಾರಿ ಕಾಯ್ದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲು ಸೂಚಿಸಿ ಮಾಲು, ಪಂಚನಾಮೆ ಮತ್ತು ಆರೋಪಿಯನ್ನು ಒಪ್ಪಿಸಿದ್ದೇನು.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 130 ಖಾಲಿ ಇರುವ original choice deluxe whisky ಟೆಟ್ರಾ ಪಾಕೇಟಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆ ಮು.ಮಾ-1 ಎಂದು ಗುರುತಿಸಲಾಯಿತು.

ಸಾಕ್ಷಿಯು ಶೋಧನಾ ಸಮುಚಿತ ಆಧಾರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ3 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಎ ಟಿ ಓ ವಕೀಲರಿಂದ**

ಬಾತ್ಮಿ ಬಂದ ವಿಷಯವನ್ನು ಸದರಿ ಪಿಐ ರವರು ನನಗೆ ತಿಳಿಸಿದಾಗ ಸಮಯ ರಾತ್ರಿ 7.00 ಗಂಟೆ ಆಗಿತ್ತು. ಪಂಚರಾದ ಚಾಸಾ2 ಮತ್ತು 3ರವರಿಗೆ ಯಾವುದೇ ನೋಟಿಸನ್ನು ನೀಡಿಲ್ಲ. ಕಲಘಟಗಿ ಠಾಣೆಯಿಂದ ಗಳಿಗೆಹೂಲಕೊಪ್ಪ ಗ್ರಾಮಕ್ಕೆ 5 ಜನ ಹೊರಟೆವು. ಕಲಘಟಗಿಯಿಂದ ಗಳಿಗೆಹೂಲಕೊಪ್ಪ ಗ್ರಾಮಕ್ಕೆ 20 ಕಿ.ಮೀ ಅಂತರ ಇದೆ. ಸದರಿ ಸ್ಥಳಕ್ಕೆ ಹೋಗುವ ದಾರಿಯಲ್ಲಿ ಅರಣ್ಯ ಪ್ರದೇಶ ಇದೆ ಎಂದರೆ ಸರಿ. ಸದರಿ ಸ್ಥಳಕ್ಕೆ ಕಲಘಟಗಿಯಿಂದ ಹೋಗಲು ಸುಮಾರು 30 ನಿಮಿಷ ತೆಗೆದುಕೊಂಡಿತು. ಸದರಿ ಪಂಚರಿಗೆ ನಾನು ಠಾಣೆಯಲ್ಲಿ ಬಂದ ಬಾತ್ಮಿ ವಿಷಯವನ್ನು ತಿಳಿಸಿ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋದೆವು. ನನ್ನನ್ನು ಕೃತ್ಯ ಸ್ಥಳಕ್ಕೆ ಕಳುಹಿಸಿದ ಬಗ್ಗೆ ಠಾಣಾ ಹೆಚ್ ಎಚ್ ಡಿಯಲ್ಲಿ ಠಾಣಾ ಪಿಐ ರವರು ನಮೂದು ಮಾಡಿದ್ದಾರೆ.

ಗಳಿಗೆಹೊಲಕೊಪ್ಪ ಗ್ರಾಮವು ಕಲಘಟಗಿ ತಾಲೂಕಿನಲ್ಲಿ ಒಂದು ದೊಡ್ಡ ಗ್ರಾಮ ಎಂದರೆ ಸರಿ. ಸದರಿ ಗ್ರಾಮದಲ್ಲಿ ವೃತ್ತಗಳು ಇವೆ ಎಂದರೆ ಸರಿ. ಸದರಿ ವೃತ್ತಗಳನ್ನು ಗಾಂಧಿ ವೃತ್ತವು ಒಂದು ಎಂದರೆ ಸರಿ. ಗಾಂಧಿ ವೃತ್ತ ಒಂದು ಪ್ರಮುಖ ವೃತ್ತವಾಗಿದೆ ಎಂದರೆ ಸರಿಯಲ್ಲ. ಸದರಿ ವೃತ್ತ ಜನ ಸಂದಣಿ ವೃತ್ತ ಎಂದರೆ ಸರಿ. ನನ್ನ ವಾಹನವನ್ನು ಕೃತ್ಯ ಸ್ಥಳದಿಂದ ಸುಮಾರು 100 ಮೀಟರ ಅಂತರದಲ್ಲಿದ್ದ ಉಡುಪಿ ಹೋಟೇಲ ಪಕ್ಕದಲ್ಲಿ ನಿಲ್ಲಿಸಿದೆ. ಗಾಂಧಿ ವೃತ್ತದಿಂದ ನಾನು ನಿಂತಿರುವ ಸ್ಥಳವು 70-80 ಅಡಿ ಇತ್ತು. ಗಾಂಧಿ ವೃತ್ತದಿಂದ ಆರೋಪಿಯು ಸುಮಾರು 10 ಅಡಿ ಅಂತರದಲ್ಲಿ ಇದ್ದರು. ನಾನು ದಾಳಿಗೆ ಹೋದಾಗ ಸಮವಸ್ತ್ರ ದಲ್ಲಿ ಇದೆ ಸಾಕ್ಷಿಯು ಮುಂದುವರೆದು ತನ್ನ ಜೊತೆಗೆ ಇದ್ದ ಪೋಲೀಸ ಸಿಬ್ಬಂದಿಗಳು ಸಮವಸ್ತ್ರದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ದಿಃ24.12.2023 ಯಾವ ದಿವಸ ಎಂದರೆ ನನಗೆ ಗೊತ್ತಿಲ್ಲ.

ಕೃತ್ಯ ಸ್ಥಳದಲ್ಲಿ ದಿಃ 24.12.2023 ರಂದು ರಾತ್ರಿ ಸುಮಾರು 8.00 ಗಂಟೆಗೆ ಬೀದಿ ದೀಪಗಳು ಇದ್ದವು. ನಾನು ಪಿಎಸ್ಐ ಆದ ಕಾರಣ ಸದರಿ ಗ್ರಾಮದಲ್ಲಿರುವ ಎಲ್ಲ ಜನರು ನನಗೆ ಪರಿಚಯ ಎಂದರೆ ಸರಿಯಲ್ಲ. ನೀವು ಪಿಎಸ್ಐ ಆದ ಕಾರಣ ಗ್ರಾಮದ ಜನರು ಬಂದು ಸದರಿ ದಿನದಂದು ನಿಮ್ಮೊಡನೆ ಮಾತನಾಡಿರಬಹುದು ಎಂದರೆ ಸಾಕ್ಷಿಯು ಸದರಿ ದಿನದಂದು ತಾನು ಕೃತ್ಯ ಸ್ಥಳದಲ್ಲಿ ಇದ್ದ ವೇಳೆ ಜನರು ಯಾರು ಇರಲಿಲ್ಲ ಆರೋಪಿ ಮತ್ತು ಇಬ್ಬರು ಸಾರ್ವಜನಿಕರು ಇದ್ದರು ಎಂದು ನುಡಿಯುತ್ತಾರೆ. ಕೃತ್ಯದ ಸ್ಥಳದ ಸ್ಥಳೀಯರನ್ನು ಪಂಚರಾಗಿ ಬರಮಾಡಿಕೊಳ್ಳಲು ಸಾಕಷ್ಟು ಇಲ್ಲದ ಕಾರಣ ಹಾಗೂ ಆಪಾದಿತರು ತಪ್ಪಿಸಿಕೊಳ್ಳುವ ಕಾರಣ ನಾನು ಕಲಘಟಗಿಯಿಂದ ಇಬ್ಬರು ಪಂಚರನ್ನು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆ.

ಬಾತ್ಮಿ ಬಂದಾಗ ಸದರಿ ಅವರು ಆರೋಪಿಯ ಚಹರೆ ಹಾಗೂ ಸದರಿ ಅವರ ಬಗ್ಗೆ ಯಾವುದಾದರೂ ನೀಡಿದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ಕೃತ್ಯ ಸ್ಥಳದಲ್ಲಿ ಒಬ್ಬ ವ್ಯಕ್ತಿಯೊಡನೆ ಇದ್ದ ಚೀಲವು ಯಾವ ಚೀಲ ಎಂದರೆ ಸಾಕ್ಷಿಯು ಗೊಬ್ಬರ ಚೀಲ ಎಂದು ನುಡಿಯುತ್ತಾರೆ. ಸದರಿ ಚೀಲದ ಮೇಲೆ ಯಾವುದಾದರೂ ಗುರುತು ಇತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ಗಮನಿಸಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಕೃತ್ಯ ಸ್ಥಳದಲ್ಲಿ ಇದ್ದ 3 ಜನರ ಪೈಕಿ ಯಾರನ್ನು ಹಿಡಿಯಲು ಪ್ರಯತ್ನಿಸಿದಿರಿ ಎಂದರೆ ಸಾಕ್ಷಿಯು ಸ್ಥಳದಲ್ಲಿ ಮದ್ಯದ ಟೆಟ್ರಾ ಪಾಕೇಟಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿರುವುದಾಗಿ ನುಡಿಯುತ್ತಾರೆ. ಕೃತ್ಯ ಸ್ಥಳದಲ್ಲಿ ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಅವನ ಹೆಸರು ದ್ಯಾಮನಗೌಡ ಬಸವನಗೌಡ ಪಾಟೀಲ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಗೊಬ್ಬರ ಚೀಲದಲ್ಲಿ ಇದ್ದ ಟೆಟ್ರಾ ಪಾಕೇಟಗಳನ್ನು ನೆಲಕ್ಕೆ ಚಲ್ಲಿಲ್ಲಾ ಎಂದರೆ ಸರಿಯಲ್ಲ. ಸದರಿ ಚೀಲದಲ್ಲಿ original choice deluxe whisky ಟೆಟ್ರಾ ಪಾಕೇಟಗಳು ಇರಲಿಲ್ಲ ಎಂದರೆ ಸರಿ. ಸದರಿ ಚೀಲದಲ್ಲಿ 120 original choice deluxe whisky ಟೆಟ್ರಾ ಪಾಕೇಟಗಳು ಇದ್ದವು. ಸದರಿ ಟೆಟ್ರಾ ಪಾಕೇಟಗಳ ಮೇಲೆ ಬ್ಯಾಚ್ ನಂಬರಗಳನ್ನು ನೋಡಿದ್ದಿರಾ ಎಂದರೆ ಸಾಕ್ಷಿಯು ಯಾವುದೇ ಬ್ಯಾಚ ನಂಬರಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ನಿಪಿ1 ರಲ್ಲಿ ನಮೂದು ಮಾಡಿಲ್ಲ. ಸದರಿ ಟೆಟ್ರಾ ಪಾಕೇಟಗಳ ಮೇಲೆ ಮ್ಯಾನಿಪ್ಯಾಚರಿಂಗ ಡೇಟ್ ನ್ನು ನೋಡಿದ್ದಿರಾ ಎಂದರೆ ಸಾಕ್ಷಿಯು ತನಗೆ ಅದರ ಅವಶ್ಯಕತೆ ಇಲ್ಲದೆ ಇದ್ದ ಕಾರಣ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ರಾಸಾಯನಿಕ ಪರೀಕ್ಷೆಗಾಗಿ ನೀವು ಎಷ್ಟು ಮದ್ಯದ ಟೆಟ್ರಾ ಪಾಕೇಟಗಳನ್ನು ಕಳುಹಿಸಿದ್ದಿರಾ ಎಂದರೆ ಸಾಕ್ಷಿಯು 120 ಮದ್ಯದ ಟೆಟ್ರಾ ಪಾಕೇಟಗಳನ್ನು ಕಳುಹಿಸಿರುವುದಾಗಿ ನುಡಿಯುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಮು. ಮಾ ಎಂದು ನಮೂದಾಗಿರುವ ಮುದ್ದೆ ಮಾಲುಗಳು ನನ್ನ ದಾಳಿಗೆ ಒಳಪಟ್ಟಿರುವ ಮುದ್ದೆ ಮಾಲುಗಳು ಎಂದರೆ ಸರಿ. ತೆರೆದ ನ್ಯಾಯಾಲಯದಲ್ಲಿ ಮು ಮಾ 1 ಎಂದು ನಮೂದಾಗಿರುವ ಟೆಟ್ರಾ ಪಾಕೇಟಗಳನ್ನು ಎಣಿಸಿ ನೋಡಿದಾಗ 130 ಟೆಟ್ರಾ ಪಾಕೇಟಗಳು ಇದ್ದವು ಎಂದರೆ ಸರಿ. ನಾನು ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಬಾತ್ಮಿ ಬಂದ ಮೇಲೆ ಕೃತ್ಯ ಸ್ದಳಕ್ಕೆ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿಗೆ ಹೋಗಿಲ್ಲ, ಯಾವುದೇ ಮುದ್ದೆ ಮಾಲನ್ನು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ಆರೋಪಿಯನ್ನು ದಸ್ತಗಿರಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡಿದೇ ಇದ್ದರು ಸದರಿಯವರು ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿಸಂಖ್ಯೆ ಸಲುವಾಗಿ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**